7. ಬೀದಿ ದೀಪದ ವ್ಯವಸ್ಥೆ ಇರುವುದಿಲ್ಲ.

8. ವಸತಿ ಗೃಹಗಳ ಎಲ್ಲೆಗಳನ್ನು ಗುರುತಿಸಿ ತಂತಿಬೇಲಿಯ ಕಾಂಪೌಂಡ್ ಹಾಕಿರುವುದಿಲ್ಲ.

ಈ ಮಧ್ಯೆ ಕಾರಾಗೃಹಗಳ ಮಹಾ ನಿರೀಕ್ಷಕರು ಈ ಕಾರಾಗೃಹದ ಕಟ್ಟಡಕ್ಕೆ ಭೇಟಿ ನೀಡಿದ್ದು ಈ ಕೆಳಗಿನ ನ್ಯೂನತೆಗಳನ್ನು ನೋಡಿರುತ್ತಾರೆ.

1. ಬ್ಯಾರಕ್‌ಗಳ ಮೇಲ್ಛಾವಣಿಯು ಸೋರಿ ಗೋಡೆಗಳು ಬಿರುಕು ಬಿಟ್ಟಿರುತ್ತವೆ.

2. ಬ್ಯಾರಕ್‌ಗಳು ಹಾಗೂ ಸೆಲ್‌ಗಳಲ್ಲಿ ನೀರು ಶೇಖರಿಸಲು ನಿರ್ಮಿಸಿದ ಸಣ್ಣ ತೊಟ್ಟಿಗಳು ಬಿರುಕು ಬಿಟ್ಟಿರುತ್ತವೆ.

3. ಶೌಚಾಲಯಕ್ಕೆ ನಿರ್ಮಿಸಿದ ಗೋಡೆಗಳು ಬಿರುಕು ಬಿಟ್ಟಿರುತ್ತವೆ.

4. ಆಗ್ನೇಯ ಭಾಗದ ಸೆಲ್‌ಗಳ ಮುಂದೆ ಕಾರಿಡಾರಿನ ನೆಲವು ಕುಸಿದಿರುತ್ತದೆ.

5. ಆಗ್ನೇಯ ಮೂಲೆಯಲ್ಲಿನ ಸ್ನಾನಘಟ್ಟ ಮತ್ತು ಶೌಚಾಲಯದ ಗೋಡೆಗಳು ಬಿರುಕು ಬಿಟ್ಟಿರುತ್ತವೆ.

ಕಾರಾಗೃಹದ ನಿರ್ಮಾಣದಲ್ಲಿ ಕಂಡುಬಂದ ಲೋಪ ದೋಷಗಳ ಬಗ್ಗೆ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಇವರಿಗೆ ಪತ್ರ ಬರೆದಿದ್ದೂ ಇವುಗಳನ್ನು ಸರಿಪಡಿಸುವಂತೆ ಕೋರಲಾಗಿದೆ. ಕಾರಾಗೃಹ ಸಂಪೂರ್ಣವಾಗಿ ನಿರ್ಮಾಣಗೊಳ್ಳದೇ ಇರುವುದರಿಂದ ಹಾಗೂ ಕಟ್ಟಡದ ನಿರ್ಮಾಣದಲ್ಲಿ ಲೋಪದೋಷಗಳು ಇದ್ದು ಅವು ಬಂಧಿಗಳ ಜೀವಕ್ಕೆ ಅಪಾಯಕಾರಿಯಾಗಿರುವುದರಿಂದ ಈ ಕಾರಾಗೃಹವನ್ನು ಇಲಾಖೆಯು ವಾಸಕ್ಕೆ ತೆಗೆದುಕೊಂಡಿರುವುದಿಲ್ಲ.

2. ಕಾರಾಗೃಹ ಇಲಾಖೆಯು ಕಟ್ಟಡವನ್ನು ವಶಕ್ಕೆ ತೆಗೆದುಕೊಳ್ಳದೇ ಇರುವುದರಿಂದ ಕಟ್ಟಡ ಶಿಥಿಲಗೊಂಡಿರುತ್ತದೆ ಎಂಬುದು ಸರಿಯಲ್ಲ. ಕಟ್ಟಡದ ನಿರ್ಮಾಣವೇ ಕಳಪೆಯಾಗಿರುತ್ತದೆ.

3. ಎಲ್ಲ ಕಾಮಗಾರಿಗಳನ್ನು ಪೂರೈಸಿದ ನಂತರ ಹಾಗೂ ನಿರ್ಮಾಣದಲ್ಲಿ ಕಂಡುಬಂದಿರುವ ಲೋಪದೋಷಗಳನ್ನು ಸರಿಪಡಿಸಿದ ನಂತರ ಕಟ್ಟಡವನ್ನು ಇಲಾಖೆಯು ತನ್ನ ವಶಕ್ಕೆ ತೆಗೆದುಕೊಂಡು ಉಪ ಕಾರಾಗೃಹವನ್ನು ಅದರಲ್ಲಿ ನಡೆಸುತ್ತದೆ.

ಧಾರವಾಡ ಜಿಲ್ಲೆಯಲ್ಲಿರುವ ಕೆರೆಗಳು

785 - ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಬರುವ ಕೆರೆಗಳು ಎಷ್ಟು? ಮತ್ತು ಅವುಗಳು ಯಾವುವು?

ಅ) ಈ ಕೆರೆಗಳಲ್ಲಿ ಹೂಳನ್ನು ಎತ್ತಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಒಟ್ಟು 1011 ಸಣ್ಣ ನೀರಾವರಿ ಕೆರೆಗಳಿದ್ದು ಅವುಗಳ ತಾಲ್ಲೂಕುವಾರು ವಿವರ ಈ ಕೆಳಗಿನಂತಿವೆ.

ಸಂ.	ತಾಲ್ಲೂಕು	ಸಣ್ಣ ನೀರಾವರಿ ಕೆರೆಗಳ ಸಂಖ್ಯೆ
1.	ಧಾರವಾಡ	174
2.	ಹುಬ್ಬಳ್ಳಿ	44
3.	ಕಲಘಟಗಿ	778
4.	ಕುಂದಗೋಳ	15
	ಒಟ್ಟು	**1011**

ಆ) 1999-2000ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ಆರು ಕೆರೆಗಳಿಂದ ಲೆಕ್ಕ ಶೀರ್ಷಿಕೆ 4702 ಕೆರೆಗಳ ಹೂಳೆತ್ತುವುದು. (ರೈತರ ಸಹಯೋಗ) ದಿಂದ ಶೇಕಡಾ 30ರಷ್ಟು ಅನುದಾನದೊಂದಿಗೆ ಹೂಳು ತೆಗೆಯುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

1. ರೈತರ ಸಹಯೋಗದಿಂದ ಹೂಳು ತೆಗೆಯುವ ಕಾರ್ಯಯೋಜನೆ ಚಾರಿಯಲ್ಲಿದೆ.
2. 1000-00 ಕೋಟಿ ರೂ.ಗಳ ವಿಶ್ವಬ್ಯಾಂಕ್ ನೆರವಿನ ಯೋಜನೆ ಸಹ ರೂಪಿಸಲಾಗಿದೆ.

ಹುಬ್ಬಳ್ಳಿ – ಧಾರವಾಡದಲ್ಲಿ ಪೊಲೀಸ್ ಸಿಬ್ಬಂದಿಗಳ ವರ್ಗಾವರ್ಗಿ

788 - ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕಳೆದ 5 ವರ್ಷಗಳಿಂದಲೂ ಸತತವಾಗಿ ಸೇವೆ ಸಲ್ಲಿಸುತ್ತಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳೆಷ್ಟು? (ಪೂರ್ಣ ವಿವರ)

ಆ) ಒಂದೇ ಸ್ಥಳದಲ್ಲಿ ಸುದೀರ್ಘ ಕಾಲ ಸೇವೆ ಸಲ್ಲಿಸಲು ಕಾರಣಗಳೇನು?

ಇ) ಸರ್ಕಾರದ ನೀತಿಯಂತೆ ಪ್ರತಿ 3 ವರ್ಷಕ್ಕೊಮ್ಮೆ ವರ್ಗಾವರ್ಗಿ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಈ ಕೆಳಕಂಡ ಪೊಲೀಸ್ ಸಿಬ್ಬಂದಿ ವರ್ಗದವರು ಹುಬ್ಬಳ್ಳಿ-ಧಾರವಾಡ